(SRI A. SHANKARA ALVA)

(*b*) The total amount allegedly misappropriated by the office bearers of societies and officials appointed by the Bangalore District Co-operative Central Bank Limited is: Rs. 14,60,286-47.

(*c*) 13 Bank Supervisors and 1 Branch Manager of the District Central Co-operative Bank are involved in misappropriation of funds.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ತಾವು (ಅ)ಗೆ ಉತ್ತರವಾಗಿ ಬೆಂಗಳೂರು ಜಿಲ್ಲೆಯ ಸಹಕಾರಿ ಸಂಘಗಳಿಗೆ ಉಂಟಾದ ನಷ್ಟದ ಹಣವು 25,34,997-67 ರೂಪಾಯಿಗಳಾಗಿರುತ್ತದೆ ಎಂದು ಹೇಳಿದ್ದೀರಿ. ಈ ರೀತಿ ಮಿಸ್‌ಅಪ್ರೊಪ್ರಿಯೇಷನ್ ಆಗಿರುವ ಬಗ್ಗೆ ಅವರ ಮೇಲೆ ಏನೇನು ಕಾರ್ಯಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅವರ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, (ಇ)ಗೆ ಉತ್ತರವಾಗಿ ಹಣದ ದುರುಪಯೋಗದ ಪ್ರಕರಣದಲ್ಲಿ ಬೆಂಗಳೂರು ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕಿನ 13 ಮೇಲ್ವಿಚಾರಕರು ಹಾಗು ಒಬ್ಬ ಬ್ಯಾಂಕ್ ಶಾಖೆಯ ಅಧಿಕಾರಿಗಳು ಒಳಗೊಂಡಿರುತ್ತಾರೆ ಎನ್ನುವ ಪಟ್ಟಿಯನ್ನು ಇಲ್ಲಿ ಇಟ್ಟಿದ್ದೀರಿ. ಮತ್ತು ಅವರ ಬಗ್ಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಖದ್ದಮೆಗಳನ್ನು ಹಾಕಲಾಗಿದೆ ಎಂದು ಹೇಳಿದ್ದೀರಿ. ಇದು ಯಾವ ಯಾವ ಹಂತದಲ್ಲಿದೆ ಎನ್ನುವುದು ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದು ಯಾವ ಯಾವ ಹಂತದಲ್ಲಿದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಅವರ ಬಗ್ಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಲಾಗಿದೆ ಎಂದು ಹೇಳುತ್ತೇನೆ.

ESTABLISHMENT OF INDUSTRIES IN BIDAR DISTRICT

357. Sri V. N. PATIL (Humnabad).—

Will the Minister for Industries be pleased to state:—

(*a*) the type of industries that could be established in Bidar District (information regarding small scale or otherwise with talukwise figures may be furnished);

(*b*) whether the Government has got any plans and schemes at present to be implemented during the course of the current financial years;

(*c*) whether any such schemes are under the consideration of the Government for including in the next financial years: if so, what are the industries and the places where they will be established (talukwise figures may be furnished)?

Sri S. M. KRISHNA (Minister for Industries).—

(*a*) There is scope for starting small scale industries like Leather Goods, Tannery, Bonemeal, Dairy products, Agricultural Implements, Steel Trunks, Mixed fertilisers and ready-made garments, etc., in Bidar District. All these industries could be started in Taluk Headquarters and even in small places.

(*b*) Yes. Rural Industries Project Scheme has been sanctioned to Bidar District. A small Artisans Programme Scheme has also been started in Bidar District.

(*c*) No.

ಶ್ರೀ ಎ. ಎನ್. ಪಾಟೀಲ್.—ಸ್ವಾಮಿ, ತಾವು (ಬಿ)ಗೆ ಉತ್ತರವಾಗಿ ಈ ರೀತಿ ಹೇಳಿದ್ದೀರಿ:— "Yes. Rural Industries Project Scheme has been sanctioned to Bidar District. A small Artisans' Programme Scheme has also been started in Bidar District" ಎಂದು. ಆದರಿಂದ ಈ ವರ್ಷದಲ್ಲಿ ಈ ಬಗ್ಗೆ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳುತ್ತೀರಿ ? ಯಾವ ಯಾವ ಹೊಸ ಕೈಗಾರಿಕೆಗಳನ್ನು ಈ ಜಿಲ್ಲೆಯಲ್ಲಿ ತೆಗೆಯುವುದಕ್ಕೆ ಸೌಲಭ್ಯಗಳನ್ನು ಇಟ್ಟುಕೊಂಡಿದ್ದೀರಿ ? ಈಗ ಯಾವುಯಾವುದನ್ನು ನಡೆಸುತ್ತಿದ್ದೀರಾ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಎಸ್. ಎಂ. ಕೃಷ್ಣ.—1972ನೇ ಇಸವಿ ಮೊದಲನೇ ಭಾಗದಲ್ಲಿ ಸ್ಮಾಲ್ ಆರ್ಟಿಸಾನ್ಸ್ ಪ್ರೋಗ್ರಾಂ ಸ್ಕೀಂನ್ನು ಸೆಂಟ್ರಲ್ ಅಸಿಸ್ಟೆನ್ಸ್ ಆಧಾರದ ಮೇಲೆ ಪ್ರಾರಂಭ ಮಾಡಿದ್ದೀವಿ. ಅದರ ಉದ್ದೇಶ ಏನೆಂದರೆ ಅವರನ್ನು ಸಣ್ಣ ಪ್ರಮಾಣದ ಕೈಕೆಲಸಗಾರರನ್ನಾಗಿ ತರಬೇತಿ ಮಾಡ ತಕ್ಕಂಥಾದ್ದು. ಅವರಿಗೆ ಕಾರ್ಪೆಂಟರಿ, ಬ್ಲಾಕ್‌ಸ್ಮಿತ್, ಮೋಟಾರ್ ವೈಂಡಿಂಗ್, ಎಲೆಕ್ಟ್ರಾನಿಕ್ಸ್ ಕಾಟನ್ ಅಂಡ್ ವೂಲ್ ವೀವಿಂಗ್ ಮತ್ತು ಲೆದರ್ ಸ್ಟಿಚಿಂಗ್ ಇವುಗಳಲ್ಲಿ ತರಬೇತಿಯನ್ನು ಕೊಟ್ಟಿರೆ, ಆ ಟ್ರೈನಿಂಗ್ ಮುಗಿದ ನಂತರ ಅಯಾಯ ಕ್ಷೇತ್ರಗಳಿಗೆ ಅವರು ಹೋಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದಕ್ಕಾಗಿ ಒದಗಿಸಿ ಕೊಂ ತಕ್ಕಂಥಾ ಸಹಾಯ ಸವಲತ್ತುಗಳನ್ನೂ ಅನುಸರಿಸಿಕೊಂಡು ತಮ್ಮದೇ ಆದಂಥ ಒಂದು ವ್ಯತ್ತಿಯನ್ನು ಅವಲಂಬಿಸಿ ಬದುಕಬೇಕು ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಆ ಜಿಲ್ಲೆಗೆ ತಂದಿದ್ದೀವೆ. ಸರ್ಕಾರದವರು ನೇರವಾಗಿ ಬೀದರ್ ಜಿಲ್ಲೆಯಲ್ಲಿ ಸ್ಥಾಪನೆ ಮಾಡತಕ್ಕಂಥ ಕಾರ್ಯಕ್ರಮ ಇಲ್ಲ. ಕಾರಣ ನಮ್ಮಲ್ಲಿ ಸಂಪನ್ಮೂಲಗಳು ಇಲ್ಲ. ಆದರೆ ಬೀದರ್ ಡಿಸ್ಟ್ರಿಕ್ಟ್‌ನ ಔದ್ಯೋಗಿಕ ದೃಷ್ಟಿಯಿಂದ ಮತ್ತು ಅದು ಹಿಂದುಳಿದ ಜಿಲ್ಲೆ ಎನ್ನುವುದನ್ನು ಪರಿಗಣಿಸಿ ಕೇಂದ್ರ ಸರ್ಕಾರದವರು ಅಲ್ಲಿಗೆ ವಿಶೇಷವಾಗಿ ಸಬ್ಸಿಡಿ ರಿಯಾಯಿತಿ ಕೊಟ್ಟಿದ್ದಾರೆ. ಮೈಸೂರು ಸರ್ಕಾರದವರೂ ಕೂಡ ಅಲ್ಲಿಗೆ ಬೇಕಾಗಿರತಕ್ಕಂಥ ಸಹಾಯ ಸವಲತ್ತುಗಳನ್ನೂ ಸಹ ಒದಗಿಸುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎ. ಎನ್. ಪಾಟೀಲ್.— ಸ್ವಾಮಿ, Leather Training, Tannery, Bonemeal, Dairy products, Agricultural Implements, Steel Trunks, Mixed fertilisers and ready-made garments etc., ಇವರ್ಲಾ ಕೈಗಾರಿಕೆಗಳನ್ನು ಬೀದರ್ ಜಿಲ್ಲೆಯಲ್ಲಿ ಪ್ರಾರಂಭಿಸುವುದಕ್ಕೆ ಸಾಧ್ಯತೆ ಇದೆ ಎಂದು ಹೇಳಿದ್ದೀರಿ. ಹಾಗಿದ್ದರೆ ಈ ವರ್ಷದಲ್ಲಿ ಯಾವುದಾದರೂ ಒಂದೆರಡು ಕೈಗಾರಿಕೆಗಳನ್ನು ಸ್ಟಾರ್ಟ್ ಮಾಡಿ ಅಲ್ಲಿನ ಜನರಿಗೆ ಹೆಚ್ಚಿಗೆ ಎಂಪ್ಲಾಯ್‌ಮೆಂಟ್‌ನ್ನು ಒದಗಿಸುವುದಕ್ಕೆ ತಮ್ಮ ಧೋರಣೆ ಇದೆಯೇ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ. ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಕೆಲಸಗಳನ್ನು ಸ್ಥಾಪನೆ ಮಾಡಬೇಕು ಎನ್ನುವುದಕ್ಕೆ ಚೆಕ್ಕೋ ಎಕನಾಮಿಕ್ ಸರ್ವೆ ನಡೆಯುತ್ತಾ ಇದೆ. ಹಿಂದೆ ಮಾಡಿದಂಥ ಸರ್ವೆ ಆಧಾರದ ಮೇಲೆ ಮಾನ್ಯ ಸದಸ್ಯರು ನಮೂದಿಸಿದಂಥ ಕೈಗಾರಿಕೆಗಳನ್ನು ಅಲ್ಲಿ ಸ್ಥಾಪನೆ ಮಾಡುವುದಕ್ಕೆ ಸಾಧ್ಯತೆ ಇದೆ. ಆದರೆ ಮಾನ್ಯ ಸದಸ್ಯರಾದ ಶ್ರೀ ಪಾಟೀಲರವರಲ್ಲಿ ನಾನು ಪ್ರಾರ್ಥನೆ ಮಾಡುವುದು ಏನೆಂದರೆ ಅವರು ಹೇಳಿದಂಥ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ

(ಶ್ರೀ ಎಸ್. ಎಂ. ಕೃಷ್ಣ)

ಅಲ್ಲಿರತಕ್ಕಂಥ ಜನಗಳಿಂದ ನಮಗೆ ಕೋರಿಕೆಗಳು ಬಂದರೆ ನಾವು ನಮ್ಮ ಇಲಾಖೆಯಿಂದ ಅವರಿಗೆ ಬೇಕಾಗಿರತಕ್ಕಂಥ ಚೆಕ್ಕಿಕರ್—ನೊ—ಹಳ್ಳಿ, ಪ್ರಾಜೆಕ್ಟ್ ರಿಪೋರ್ಟ್ ಮತ್ತು ಫೈನಾಷಿಯಲ್ ಅಸಿಸ್ಟೆನ್ಸ್ ಇವು ಮೂರನ್ನೂ ನಮ್ಮ ಇಲಾಖೆಯಿಂದ ದೊರಕಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಅವರು ಕೆಲವು ಉದ್ದಿಮೆಗಾರರನ್ನು ಕರೆದುಕೊಂಡು ಬಂದು ಕೊಡಬೇಕು ಎಂದು ಹೇಳುತ್ತೇನೆ.

DRINKING WATER WELLS IN CHIKODI CONSTITUENCY

365. Sri P. P. HEGRE (Chikodi).—

Will the Minister for Community Development and Social Welfare be pleased to state:—

(*a*) the names of villages in Chikodi Constituency in Belgaum District where there are no Drinking Water Wells;

(*b*) the names of villages where there are no separate Drinking Water Wells for Scheduled Caste people;

(*c*) the reasons for not providing Drinking Water Wells to these villages;

(*d*) when the Government intends to provide Drinking Water Wells to these villages?

Sri M. MALLIKARJUNA SWAMY (Minister for Community Development and Social Welfare).—

(*a*) 1. Belgali
2. Basanalgadde, hamlet of Hirekudi
3. Handyanath, hamlet of Chincholi
4. Kupanawadi, hamlet of Chincholi.

(*b*) There are 34 villages having Scheduled Caste population and no separate Drinking Water Wells are provided for them. The names of these villages are indicated in the list appended.

(*c*) The Scheduled Caste people are part of the village unit and the water supply facilities provided for the villages serve the needs of the Scheduled Caste people also.

(*d*) Does not arise.